Fifth Report of the Committee on Subordinate Legislation–Presentation

SRI M. B. RAMASWAMY (Anekal).— Madam, I beg to present the Fifth Report of the Committee on Subordinate Legislation.

MADAM SPEAKER.—The report is presented.

Matter Under Rule 312

re ; disposal of levy paddy by Government.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ) .— ಮಾನ್ಯ ಸಭಾಧ್ಯಕ್ಷಿಣಿಯವರೆ, ನಾನು ಮತ್ತು ನನ್ನ ಇಬ್ಬರು ಮಿತ್ರರಾದ ಸರ್ವಶ್ರೀ ಕಾಗೋಡು ತಿಮ್ಮಪ್ಪನವರು ಹಾಗೂ ಬೈರೇಗೌಡರೂ ಸೇರಿ 312ನೇ ನಿಯಮದ ಪ್ರಕಾರ ರಾಜ್ಯಸರ್ಕಾರದವರು ನಮ್ಮ ರಾಜ್ಯದಲ್ಲಿರ ತಕ್ಕಂಥ ಭತ್ತದ ದಾಸ್ತಾನು ಏನಿದೆ ಅದನ್ನು ಈಗ ಮಾರಾಟ ಮಾಡುವುದಕ್ಕಾಗಿ ಕೊಟೇಷನ್ ಗಳನ್ನು ಕರೆದಿದ್ದಾರೆ, ಮತ್ತು ಅದನ್ನು ಸ್ವೀಕರಿಸುವ ಹಂತದಲ್ಲಿದ್ದಾರೆಂದು ತಿಳಿದಮೇಲೆ ಇದು ಬಹಳ ಜರೂರಾದ ಪ್ರಶ್ನೆ ಈ ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡುವುದಕ್ಕೆ ನಮಗೆ ಅವಕಾಶ ವನ್ನು ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದ್ದೆವು. ತಾವು ಅದಕ್ಕೆ ಮನ್ನಣೆ ಕೊಟ್ಟು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದಕ್ಕಾಗಿ ಪ್ರಥಮವಾಗಿ ತಮಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಸಾರಿ ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಅಂದೊಡಗಿರುವ ಸನ್ನಿವೇಶದಲ್ಲಿ ನಮ್ಮಲ್ಲಿರತಕ್ಕಂಥ ಭತ್ತದ ದಾಸ್ತಾನು ಏನಿದೆ ಇದು ಇವತ್ತಿನ ನಮ್ಮ ರಾಜ್ಯದ ಅವಶ್ಯಕತೆಯನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಭಾವನೆ. ಬದರೆ ಸರ್ಕಾರದವರು ನಮ್ಮಲ್ಲಿರತಕ್ಕ ದಾಸ್ತಾನು ಅಧಿಕವಾಗಿದೆ, ಈ ಸಾರಿ ಹೆಚ್ಚಿನ ರೀತಿಯಲ್ಲಿ ಶೇಖರಣೆ ಮಾಡಿದ್ದೇವೆ ಎಂದು ಕೋಟೆಷನ್ ಕರೆದು ಬಹಿರಂಗವಾಗಿ ಮಾರಾಟ ಮಾಡುತ್ತೇವೆಂದು ಹೇಳಿದ್ದೀರಿ. ಇದನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಮತ್ತು ತಾವು ಈ ಕೋಟೆಷನು ಗಳನ್ನು ಸ್ವೀಕಾರ ಮಾಡುವ ಕೂನೆಯ ಹಂತದಲ್ಲಿಯೂ ಇದ್ದೀರಿ ಎಂದು ತಿಳಿದಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ, ನಾನು ಕೆಲವು ವಿಷಯಗಳನ್ನು ಸಂಗ್ರಹ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಈ ಸಾರಿ 3 ಲ ಟನ್ ಭತ್ತದ ದಾಸ್ತಾನು ಮಾಡಿದ್ದೀರಿ ಎಂದು ಕೇಳಿದ್ದೇನೆ ಇಷ್ಟಕ್ಕೆ ಸುಮಾರು 38—39 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ದ್ದೀರಿ ಎಂಬುದನ್ನೂ ತಿಳಿದುಕೊಂಡಿದ್ದೇನೆ. ಈ ಒಂದು ದಾಸ್ತಾನು ಏನಿದೆ ಇದನ್ನು ಶೀರ್ತಿ ಯಾಗಿ ಇಟ್ಟುಕೊಳ್ಳುವ ಅವಶ್ಯಕತೆ ಏನೂ ಇಲ್ಲವೆಂದು ಭಾವಿಸಿ ಸುಮಾರು ಒಂದು—ಒಂದೂವರೆ ಲಕ್ಷ ಟನ್‌ನ್ನು ಮಾರಾಟ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡಿದ್ದೀರಿ. ಇದರಲ್ಲಿ ನನ್ನ ವ್ಯಯ ಕ್ಕಿಂತ ಅಧಿಪ್ರಾಯವನ್ನು ಹೇಳಿದರೆ ಅವಕ್ಕೆ ತಾವೂ ಪುರಸ್ಕಾರ ನೀಡುತ್ತೀರಿ ಹಾಗೂ ಸಭೆಯೂ ಕೂಡ ಪುರಸ್ಕಾರವನ್ನು ನೀಡುತ್ತದೆಂದು ಆಶಿಸುತ್ತೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಸಾರಿ ಮೈನರ್ ಇರಿಗೇಷನ್ ಇರುವ ಕಡೆಗಳಲ್ಲಿ ಕೆರೆ ಗಳಿಗೆ ನೀರು ಬರಲಿಲ್ಲ ಎಂದೂ ಬೆಳೆಯನ್ನು ಯಾರೂ ಇಟ್ಟಿಲ್ಲ ಮೈನರ್ ಇರಿಗೇಷನ್ ಇರುವ ಕಡೆ ಗಳಲ್ಲಿ ಬೆಳೆಯನ್ನು ಇಟ್ಟಿದ್ದಾರೆ. ಈ ರೀತಿ ಬೆಳೆಯನ್ನು ಇಟ್ಟಿದ್ದರೂ ಕೂಡ ಮೇಲು ಮಳೆ ಬಾರದೇ ಇರುವುದರಿಂದ ಬರಬೇಕಾದ ಬೆಳೆಯೆಲ್ಲ ಹುಲುಸಿಲ್ಲದೆ, ಜೊಳ್ಳಾಗಿ, ಕಡಿಮೆ ಬೆಳೆ ಯಾಗುತ್ತದೆ ಇದು ಎಲ್ಲರಿಗೂ ತಿಳಿದಿರುವ ವಿಷಯ. ಇಂಥ ಸನ್ನಿವೇಶದಲ್ಲಿ ನಮ್ಮ ರಾಜ್ಯ ಸರ್ಕಾರದವರು ಈ ವರ್ಷ ಸುಮಾರು ಎರಡೂವರೆ ಲಕ್ಷ ಟನ್ ಭತ್ತ ಬರುತ್ತದೆ ಎಂಬ ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೆಂದು ಪತ್ರಿಕೆಗಳಲ್ಲಿ ನೋಡಿ ತಿಳಿದುಕೊಂಡ್ದಿದೇನೆ. ತಾವು ಈ ರೀತಿ ಏನು ಎರಡೂವರೆ ಲಕ್ಷ ಟನ್ ಬರುತ್ತದೆಂದು ಟಾರ್ಗೆಟ್‌ನ್ನು ನಿಗದಿ ಮಾಡಿಕೊಂಡಿದ್ದೀರಿ